# ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪ್ರಶ್ನೆಪತ್ರಿಕೆ

## (KSISF-SI-2012)

## ಸಾಮಾನ್ಯ ಅಧ್ಯಯನ, ಪತ್ರಿಕೆ -1

## ಪ್ರಬಂಧ ಮತ್ತು ಭಾಷಾಂತರ

**ಸಮಯ : 60 ನಿಮಿಷಗಳು** **ಅಂಕಗಳು:50**

1. ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. ಪದ ಮಿತಿಯನ್ನು ಮೀರಿದರೆ ಅಂಕಗಳನ್ನು ಕಳೆಯಲಾಗುವುದು.

   ಎ. ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ

   ಬಿ. ಮೊಬೈಲ್ ಫೋನ್ - ವರವೋ ಶಾಪವೋ

   ಸಿ. ಪ್ರಪಂಚದ ಪಾರಂಪರಿಕ ಸ್ಥಳಗಳ ಪಟ್ಟಿಯಲ್ಲಿ ಪಶ್ಚಿಮ ಘಟ್ಟಗಳು

   ಡಿ. ಹಿಗ್ಸ್‌ಬೋಸನ್ ದೇವಕಣದ ಪತ್ತೆಗೆ ಭಾರತೀಯರ ಕೊಡುಗೆ

2. ಈ ಕೆಳಕಂಡ ಪ್ಯಾರಾವನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ.

ತಲೆಯಿಲ್ಲದ ಮೂರ್ತಿಗಳು : ಭಯಾನಕವಾದ ಚಂಡಮಾರುತವೊಂದು ಮೂರ್ತಿಗಳನ್ನುರುಳಿಸಿತು. ಕೆಲವು ಧೂಳಿನಲ್ಲಿ ಬಿದ್ದವು, ಮತ್ತೆ ಕೆಲವು ತಮ್ಮ ತಲೆ ಕಳೆದುಕೊಂಡವು. ಈ ಹೃದಯ ಹೀನ ಚಂಡಮಾರುತವು ದಿಗಂತದಲ್ಲಿ ಉದಯಿಸಲಿಲ್ಲ. ಆದರೆ ಅದು ಭೂಮಿಯ ಅಂತರಾಳದಿಂದ ಬಂತು. ಭೂಮಿಯ ಅಂತರಾಳದಿಂದ ಏನೇ ಬಂದರೂ ಅದು ತುಂಬಾ ಆತ್ಮೀಯ ಸುಖದಂತೆ ಇಲ್ಲವಾದರೆ ಮೂರ್ತಿಗಳನ್ನು ಉರುಳಿಸಿದ ಚಂಡಮಾರುತದಂತೆ.

ಪುಡಿ - ಪುಡಿಯಾಗಿ ಉಳಿದ ಮೂರ್ತಿಗಳ ತಲೆಗಳು ಹಾರಿಹೋದವು. ಅವುಗಳ ಹಿಂದೆ ಏನೂ ಉಳಿಯಲಿಲ್ಲ. ಅದರ ಕಳೆದು ಹೋದ ಯುಗದ ವಿಲಕ್ಷಣ ಸಾಕ್ಷಿಗಳಾಗಿ ತಲೆಯಿಲ್ಲದ ದೇವರುಗಳು ಅಲ್ಲಿ ಉಳಿದವು.

ತಲೆ ಕಳೆದುಕೊಂಡ ದೇವರು, ಆಕೃತಿ ಕಳೆದುಕೊಂಡ ನಿಸರ್ಗ ಮತ್ತು ಅಲ್ಲಿ ಬದುಕುಳಿದ ಜನರು ಗೊತ್ತು ಗುರಿಯಿಲ್ಲದೆ ಅಲ್ಲಿ ಅಡೆದಾಡಿದರು. ಮೂರ್ತಿಗಳು ನಾಶವಾಗುವುದಕ್ಕೆ ಮುಂಚೆ ಹುಚ್ಚಿ ಉತ್ಸವಗಳಲ್ಲಿ ಮೂರ್ತಿಗಳ ಭವ್ಯತೆಯನ್ನು ಕಂಡವರು ಕಳೆದು ಹೋದ ಯುಗಕ್ಕಾಗಿ ರೋಧಿಸಿದರು. ಈಗಲೂ ಅವರು ತಾವು ಸತ್ತರೆ ಆ ದೇವರುಗಳು ತಮ್ಮನ್ನು ಬದುಕಿಸುತ್ತವೆಂದು ನಂಬಿದ್ದರು. ತಲೆಯಿಲ್ಲದ ಮೂರ್ತಿಗಳ ಯುಗದಲ್ಲಿ ಜನಿಸಿದ ಜನರಿಗೆ ಮತ್ತು ಆ ಮೂರ್ತಿಗಳ ಯುಗದಲ್ಲಿ ಜನಿಸಿದ ಜನರಿಗೆ ಆ ಮೂರ್ತಿಗಳನ್ನು ತೆಗೆದುಕೊಂಡು ಏನು ಮಾಡಬೇಕೆಂದು ಗೊತ್ತಿರಲಿಲ್ಲ. ಅವರು ಅವುಗಳನ್ನು ಪೂಜಿಸಬೇಕು ಎಂದುಕೊಂಡರು. ಆದರೆ ಅಲ್ಲಿ ಪೂಜಿಸಲಿಕ್ಕೆ ಏನಿತ್ತು ? ಮುಖವಿಲ್ಲದ ಆಕೃತಿಗಳು, ಅವರು ಅದನ್ನು ನಂಬಬೇಕು ಎಂದುಕೊಂಡರು. ಆದರೆ ಅಲ್ಲಿ ನಂಬಲಿಕ್ಕೆ ಏನಿತ್ತು ? ಮೆದುಳಿಲ್ಲದ ದೇಹ.

ಆ ಅಸಹ್ಯವಾದ ಮೂರ್ತಿಗಳನ್ನು ಯಾವ ರೀತಿ ಪೂಜಿಸಬಹುದು? ಯಾರು ತಲೆಯಿಲ್ಲದ ದೇವರನ್ನು ಪೂಜಿಸುತ್ತಾರೆ? ತಲೆಯಿಲ್ಲವೆಂದರೆ ಅದು ಒಂದು ಶವ. ಶವಕ್ಕೆ ಜೀವಿಸುತ್ತಿರುವವರ ಮಧ್ಯೆ ಸ್ಥಳವಿಲ್ಲ. ಹೂತು ಹಾಕಲಿಕ್ಕೆ ಬೇರೆ ಯಾವುದೇ ಸಂಪರ್ಕವನ್ನು ಅದರೊಂದಿಗೆ ಇಟ್ಟುಕೊಂಡರೆ ಅದು ದುರಂತವಾಗುವುದು ಸಹಜ. ಒಂದು ಮಹಾ ದುರಂತ. ಒಂದು ರಾಷ್ಟ್ರವೇ ನಾಶವಾಗಬಹುದು. (ನಮ್ಮ ದೇಶ ನಾಶವಾಗಲಿಲ್ಲ, ಏಕೆಂದರೆ ಒಂದೇ ಕಾರಣ ನಮ್ಮ ಹತ್ತಿರದ ನೆರೆಹೊರೆಯವರು ಕೂಡ ಇದೇ ಗತಿಯನ್ನು ಕಂಡರು)

ತಲೆಯಿಲ್ಲದ ದೇವರುಗಳು! ಅವುಗಳ ಸ್ಮಶಾನದಲ್ಲಿ ಅವುಗಳ ಸಾವನ್ನು ಸಾರುವ ಗಂಟೆಗಳು ಮೊಳಗುತ್ತವೆ. ಮಿನಾರತ್ತುಗಳು ಹಿಂದಕ್ಕೆ ಬಾಗುತ್ತವೆ ಮತ್ತು ಮಂತ್ರವನ್ನು ಹೇಳುವ ದವಡೆ ಕೀಲಿನಿಂದ ಹಾರಿ ಹೋಗುತ್ತದೆ. ಅದರ ನಂತರ ಶಾಂತಿ ಉಳಿಯುತ್ತದೆ. ಏಕೆಂದರೆ ಯಾವುದೇ ಕಿರುಚಾಟ ಶಾಂತಿಯಲ್ಲಿ ಕೊನೆಗೊಳ್ಳುತ್ತದೆ. ಅದಾದ ಮೇಲೆಯೇ ಕೆಲಸ ಆರಂಭವಾಗುತ್ತದೆ.

3. ಈ ಕೆಳಗಿನ ಕಂಡಿಕೆಯನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ.

No one knows Luli. Even the friends playing with him don't know him. Or rather, they know him, but play among themselves, and Luli watches them. Everyone has his own problems and difficulties nowadays, even children. So does Luli. Oh Luli, how early you learned to stand on your own two feet.

When Luli enters the schoolyard, with a slight grin on his face, he speaks to no one. He walks slowly, glancing to the left and to the right, advancing all the time until he reaches the school door. This is his favourite spot. There he stands in the golden rays of the sun in these autumn days. Luli learns against the wall, little fists clenched in his pockets and his snubby nose, red from the morning frost, turned in the direction of the sun, and looks around. What attracts his attention most are the boots which the other school boys are wearing..? "How splendid they are! Look how they shine!" thinks Luli to himself and then stares down at his own beat-up shoes, with five bare toes protruding from each. Out of curiosity, he approaches one of the boys who is wearing brand-new-boots. "Look how they're shining!". But the lad with the boots runs off, and Luli returns too his spot in the sun to warm his feet. What is poor Luli supposed to do when the sun is not shining? Perhaps the apostles of love and mercy will bear some of his suffering.

Perhaps, perhaps...

# ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರಶ್ನೆಪತ್ರಿಕೆ

# (KSISF- SI - 2012)

ಅವಧಿ : 90 ನಿಮಿಷ **(ಪತ್ರಿಕೆ – 2)** ಅಂಕಗಳು : 150

**1. ಹೂವಿನ ಬಣ್ಣಕ್ಕೆ ಕಾರಣ**

ಎ. ಪತ್ರಹರಿತ್ತು ಬಿ. ಆಂತೋಸ್ಯೆಯಾನಿನ್ಸ್

ಸಿ. ಫೈಟೋಕ್ರೋಮ್ಸ್ ಡಿ. ಮೆಲಾನಿನ್

**2. ವಂಶವಾಹಿನಿಯು**

ಎ. ನಿದ್ರಾಪ್ರಚೋದಕ ಔಷಧ

ಬಿ. ಅನುವಂಶೀಯತೆಯ ಭಾಗ

ಸಿ. ಜೀವಸತ್ವದ ಒಂದು ವಿಧ

ಡಿ. ದೇಹದ ಒಂದು ರೀತಿಯ ಜೀವಕೋಶ

**3. ಕಾನೂನಿನ ಮುಂದೆ ಸಮಾನರು ಎಂಬ ಪರಿಕಲ್ಪನೆಯ ನಡಾವಳಿ ಮುಂದಿಟ್ಟವರು.**

ಎ. ಕ್ಯಾಬಿನೆಟ್ ಮಿಷನ್ ಬಿ. ಸೈಮನ್ ಕಮಿಷನ್

ಸಿ. ಸ್ವರಾಜ್ ಬಿಲ್ ಡಿ. ಯಾವುದೂ ಅಲ್ಲ

**4. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಿದ ಸಂವಿಧಾನದ ವಿಧಿ.**

ಎ. 15 ಬಿ. 16 ಸಿ. 17 ಡಿ. 18

**5. ಸಂವಿಧಾನದ ಮೂರನೇ ಭಾಗದ ಈ ಕೆಳಕಂಡ ಯಾವುದರ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯದ ನೆರವು ಪಡೆಯಬಹುದು?**

ಎ. ಮೂಲಭೂತ ಹಕ್ಕುಗಳು

ಬಿ. ಕಾನೂನಿನ ಹಕ್ಕು

ಸಿ. ಸಂವಿಧಾನದ ಹಕ್ಕು ಡಿ. ಶಾಸನಬದ್ಧ ಹಕ್ಕು

**6. ಯಾರ ವಿರುದ್ಧ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ?**

ಎ. ರಾಜ್ಯಗಳು ಬಿ. ಮುನ್ಸಿಪಾಲಿಟಿಗಳು

ಸಿ. ಖಾಸಗಿವ್ಯಕ್ತಿಗಳು ಡಿ. ಜಿಲ್ಲಾ ಬೋರ್ಡ್‌ಗಳು

**7. ಅಧೀನ ನ್ಯಾಯಲಯಗಳು ನಿರ್ಧಿಷ್ಟ ವಿಷಯಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಮೀರಿದಾಗ ವ್ಯವಹರಣೆಯನ್ನು ಮುಂದುವರಿಸದಂತೆ ಉಚ್ಚ ನ್ಯಾಯಾಲಯವು ಆದೇಶಿಸುವ ರಿಟ್‌ನ ಹೆಸರು.**

ಎ. ಹೇಬಿಯಾಸ್ ಕಾರ್ಪಸ್ ಬಿ. ಮ್ಯಾಂಡಮಾಸ್

ಸಿ. ಸರ್ಶಿಯರರಿ ಡಿ. ಪ್ರೊಹಿಬಿಷನ್

**8. ಸಂವಿಧಾನದ ಮೂಲ ರಚನೆಯನ್ನು ಸಂಸತ್ತು ತಿದ್ದುಪಡಿ ಮಾಡುವ ಅಧಿಕಾರ ಹೊಂದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಆದೇಶಿಸಿದ್ದು ಈ ಕೆಳಕಂಡ ಯಾವ ಪ್ರಕರಣದಲ್ಲಿ?**

ಎ. ಮಿನರ್ವ ಮಿಲ್ ಪ್ರಕರಣ

ಬಿ. ಕೇಶವಾನಂದ ಭಾರತಿ ವಿರುದ್ಧ ಸ್ಟೇಟ್ ಆಫ್ ಕೇರಳ

ಸಿ. ಗೋಲಕನಾಥ ವಿರುದ್ಧ ಸ್ಟೇಟ್ ಆಫ್ ಪಂಜಾಬ್

ಡಿ. ಶಂಕರಿಪ್ರಸಾದ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ

**9. ಬಂಧನಕ್ಕೆ ಒಳಗಾದ ವ್ಯಕ್ತಿಯನ್ನು ಎಷ್ಟು ಗಂಟೆಯ ಒಳಗೆ ನ್ಯಾಯಾಧೀಶರ ಮುಂದೆ ಹಾಜರು ಪಡಿಸಬೇಕು?**

ಎ. 48 ಬಿ. 24

ಸಿ. ಒಂದು ವಾರ ಡಿ. ಆರು ವಾರ

**10. ಅನುಚ್ಛೇದ 30ರಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿರುವುದು.**

ಎ. ಧಾರ್ಮಿಕ ಅಲ್ಪಸಂಖ್ಯಾತರಿಗೆ

ಬಿ. ಭಾಷಾ ಅಲ್ಪಸಂಖ್ಯಾತರಿಗೆ

ಸಿ. ನಾಗರೀಕರಿಗೆ

ಡಿ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ

**11. ಹೇಬಿಯಾಸ್ ಕಾರ್ಪಸ್‌ರಿಟ್ ಎಂದರೆ**

ಎ. ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು

ಬಿ. ನಾವು ಆಜ್ಞೆ ಮಾಡುವುದು

ಸಿ. ಸ್ವಾಭಾವಿಕ ಹಕ್ಕು

ಡಿ. ಅನೂರ್ಜಿತ ಆದೇಶ

**12. ಮ್ಯಾಂಡಮಸ್ ರಿಟ್ ಹೊರಡಿಸುವುದು ಈ ಕೆಳಕಂಡ ಕಾರಣದಿಂದ**

ಎ. ಕಾನೂನುಬಾಹಿರ ಬಂಧನ

ಬಿ. ಸಾರ್ವಜನಿಕ ಕಛೇರಿಯಲ್ಲಿ ಕಾನೂನು ಬಾಹಿರ ವೃತ್ತಿ ನಡೆಸುವುದು